ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

## ಕಂಪ್ಯೂಟರ್‌ನಿಂದ ಪ್ರಶ್ನೆಗಳನ್ನು ಕಾಪಿ ಮಾಡಿ ಎಸ್‌ಡಿಎ ರಮೇಶನಿಗೆ ಕೊಟ್ಟಿದ್ದ ಸನಾ

# ಪ್ರಶ್ನೆಪತ್ರಿಕೆ ಸೋರಿಕೆ ಮೂಲ ಸ್ಟೆನೋಗ್ರಾಫರ್!

ವಿಕ ಸುದ್ದಿಲೋಕ ಬೆಂಗಳೂರು

ಕೆಪಿಎಸ್‌ಸಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ 'ಮೂಲ' ಕೆಪಿಎಸ್‌ಸಿ ಕಚೇರಿಯೇ ಎಂಬುದನ್ನು ಬಯಲು ಮಾಡಿರುವ ಸಿಸಿಬಿ, ಪ್ರಶ್ನೆಗಳಿದ್ದ ಕಂಪ್ಯೂಟರ್‌ನಿಂದ ಪೆನ್‌ಡ್ರೈವ್‌ಗೆ ಕಾಪಿ ಮಾಡಿಕೊಂಡು ಸೋರಿಕೆ ಮಾಡಿದ್ದ ಸ್ಟೆನೋಗ್ರಾಫರ್ ಸೇರಿದಂತೆ ಆಯೋಗದ ಇಬ್ಬರು ನೌಕರರನ್ನು ಬಂಧಿಸಿದೆ.


ಸನಾ ಬೇಡಿ

ಕೆಪಿಎಸ್‌ಸಿ ಪರೀಕ್ಷೆಗಳ ವಿಭಾಗದ ಕಂಟ್ರೋಲರ್ ಕಚೇರಿ ಸ್ಟೆನೋಗ್ರಾಫರ್ ಸನಾ ಬೇಡಿ ಹಾಗೂ ಆಯೋಗದ ದ್ವಿತೀಯ ದರ್ಜೆ ಸಹಾಯಕ ರಮೇಶ್ ಹೆರಕಲ್ ಅವರನ್ನು ಸೋಮವಾರ ಬಂಧಿಸಲಾಗಿದೆ.

ಪರೀಕ್ಷಾ ವಿಭಾಗದ ಕಂಪ್ಯೂಟರ್‌ನಿಂದ ಸನಾ ಬೇಡಿ ಪ್ರಶ್ನೆ ಪತ್ರಿಕೆ ಕಾಪಿ ಮಾಡಿಕೊಂಡು ನಂತರ ಅವುಗಳನ್ನು ರಮೇಶ್ ಹೆರಕಲ್‌ಗೆ ಕೊಟ್ಟಿದ್ದಳು ಎಂಬುದು ತನಿಖೆಯಿಂದ ಬಹಿರಂಗಗೊಂಡಿದೆ.

ಪ್ರಶ್ನೆಗಳಿರುವ ಕಂಪ್ಯೂಟರ್ ಪಾಸ್‌ವರ್ಡ್ ಅರಿತಿದ್ದ ಸನಾ, ಜ.18ರಂದೇ ಪ್ರಶ್ನೆಗಳನ್ನು ಪೆನ್‌ಡ್ರೈವ್‌ಗೆ ಕಾಪಿ ಮಾಡಿಕೊಂಡು ಎಸ್‌ಡಿಎ ರಮೇಶ್‌ಗೆ ನೀಡಿದ್ದಳು. ಆರೋಪಿ ರಮೇಶ್, ಆ ಪ್ರಶ್ನೆಗಳನ್ನು ಪ್ರಿಂಟ್ ಹಾಕಿಕೊಂಡು ವಾಣಿಜ್ಯ ತೆರಿಗೆ ಇಲಾಖೆ ಇನ್‌ಸ್ಪೆಕ್ಟರ್ ಚಂದ್ರು, ರಾಚಪ್ಪ ಅವರ ಮೂಲಕ ಅಭ್ಯರ್ಥಿಗಳಿಗೆ ತಲಾ 10 ಲಕ್ಷ ರೂ.ಗಳಂತೆ ಮಾರಿಕೊಂಡಿದ್ದ. ಪರೀಕ್ಷೆಗೆ ಒಂದೆರಡು ದಿನಗಳ ಮೊದಲು ಪತ್ರಿಕೆ ಮಾರಾಟದ ವ್ಯವಹಾರ ಆರಂಭಿಸಿದ್ದರು ಎಂಬುದು ಸಿಸಿಬಿ ಪೊಲೀಸರ ಈವರೆಗಿನ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಆರೋಪಿ ಸನಾ, 2017ರಲ್ಲಿ ಸ್ಟೆನೋಗ್ರಾಫರ್ ಆಗಿ ಕೆಲಸಕ್ಕೆ ಸೇರಿದ್ದಳು. ರಮೇಶ್ ಕೂಡ ನಾಲ್ಕೈದು ವರ್ಷಗಳ ಹಿಂದೆ ಎಸ್‌ಡಿಎ ಆಗಿ ಕೆಪಿಎಸ್‌ಸಿಗೆ ಸೇರಿದ್ದ. ಆರಂಭದಲ್ಲಿ ಪರೀಕ್ಷಾ ವಿಭಾಗದಲ್ಲೇ ರಮೇಶ್ ಕೆಲಸ ಮಾಡುತ್ತಿದ್ದ, ಅದಾದ ನಂತರ ಬೇರೆ ವಿಭಾಗಕ್ಕೆ ವರ್ಗಾವಣೆಗೊಂಡಿದ್ದ.

ಪರೀಕ್ಷೆ ವಿಭಾಗದಲ್ಲಿದ್ದ ಕಾರಣ ಆತನಿಗೆ ಪ್ರಶ್ನೆಪತ್ರಿಕೆ ತಯಾರಿ, ಪ್ರಶ್ನೆಗಳು ಎಲ್ಲಿರುತ್ತವೆ? ಯಾವಾಗ ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗುತ್ತದೆ. ಪ್ರಶ್ನೆಗಳಿರುವ ಕಂಪ್ಯೂಟರ್‌ನ ಪಾಸ್‌ವರ್ಡ್ ಯಾರಿಗೆ ಗೊತ್ತಿರುತ್ತದೆ ಎಂಬ ಸಾಮಾನ್ಯ ಮತ್ತು ಗೌಪ್ಯ ಮಾಹಿತಿ ಗೊತ್ತಿತ್ತು. ಆ ವಿಭಾಗಕ್ಕೆ ಕೆಪಿಎಸ್‌ಸಿಯ ಯಾವುದೇ ಸಿಬ್ಬಂದಿಗೆ ಪ್ರವೇಶ ಇರುತ್ತಿರಲಿಲ್ಲ. ಆ ವಿಭಾಗದಲ್ಲಿ ಸನಾ ಕೆಲಸ ಮಾಡುತ್ತಿರುವುದು ರಮೇಶ್‌ಗೆ ಗೊತ್ತಿತ್ತು. ಒಂದೇ ಕಚೇರಿಯಲ್ಲಿದ್ದ ಕಾರಣ ಪರಸ್ಪರ ಪರಿಚಯವಾಗಿದ್ದರು.

**ವಿಧಾನಸೌಧದಲ್ಲಿ ಕೆಲಸಕ್ಕೆ ಸೇರಲು ಯೋಚಿಸಿದ್ದ ರಮೇಶ್!**

'ಎಸ್‌ಡಿಎ ಆಗಿ ಕೆಪಿಎಸ್‌ಸಿಯಲ್ಲಿದ್ದರೆ ಬೇರೆ ಇಲಾಖೆಗಳಿಗೆ ವರ್ಗಾವಣೆ ಸಿಗುವುದಿಲ್ಲ. ಇದೇ ಕಚೇರಿಯಲ್ಲಿ ಇರಲು ಇಷ್ಟವಿಲ್ಲ. ಎಫ್‌ಡಿಎ ಆಗಿ ವಿಧಾನಸೌಧಕ್ಕೆ ಹೋಗಬೇಕು ಎಂದು ಯೋಚನೆ ಮಾಡಿದ್ದೇನೆ. ಅತಿ ಹೆಚ್ಚು ಅಂಕ ಪಡೆದರೆ ವಿಧಾನಸೌಧದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಹೀಗಾಗಿ ಪ್ರಶ್ನೆ ಪತ್ರಿಕೆ ತೆಗೆದುಕೊಡುವಂತೆ ರಮೇಶ್ ತನಗೆ ಕೇಳಿದ್ದ. ಹೀಗಾಗಿ, ಪ್ರಶ್ನೆಗಳನ್ನು ಕಾಪಿ ಮಾಡಿಕೊಂಡಿದ್ದೆ' ಎಂದು ಸನಾ ಪ್ರಾಥಮಿಕ ವಿಚಾರಣೆ ವೇಳೆ ತಿಳಿಸಿದ್ದಾಳೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ರಮೇಶ್‌ನಿಂದ ಸನಾ ಈವರೆಗೆ ಹಣ ಪಡೆದಿರುವ ಮಾಹಿತಿ ಇಲ್ಲ. ಅದೇ ರೀತಿ ರಮೇಶ್‌ನ ಬಳಿ ಹೆಚ್ಚಿನ ಹಣ ಸಿಕ್ಕಿಲ್ಲ. ಆತನಿಂದ ಪ್ರಶ್ನೆಪತ್ರಿಕೆ ಪಡೆದಿರುವ ತೆರಿಗೆ ಇಲಾಖೆ ಇನ್‌ಸ್ಪೆಕ್ಟರ್ ಚಂದ್ರು ಮತ್ತು ಮತ್ತೊಬ್ಬ ಆರೋಪಿ ರಾಚಪ್ಪ ಅವರು ಅಭ್ಯರ್ಥಿಗಳಿಂದ ಹಣ ಪಡೆದಿದ್ದಾರೆ. ಬಹುಶ ಡೀಲ್ ಮುಗಿದ ಬಳಿಕ ಬಂದ ಹಣವನ್ನು ಮೂಲ ಸೋರಿಕೆದಾರರೊಂದಿಗೆ ಹಂಚಿಕೊಳ್ಳುವ ಯೋಚನೆ ಮಾಡಿರಬಹುದು. ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆ ಹಾಕಲಾಗುವುದು ಎಂದು ಅಧಿಕಾರಿ ತಿಳಿಸಿದರು. ಚಂದ್ರು ಈಗಾಗಲೇ ಸಿಸಿಬಿ ವಶದಲ್ಲಿದ್ದಾನೆ. ಉಳಿದಂತೆ ಬಂಧಿತರಾದ ಸನಾ, ರಮೇಶ್ ಮತ್ತು ಜೈಲಿನಲ್ಲಿರುವ ರಾಚಪ್ಪನನ್ನು ಕೂಡ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತದೆ ಎಂದು ತನಿಖಾಧಿಕಾರಿ ವೇಣುಗೋಪಾಲ್ ತಿಳಿಸಿದರು.

### [illegible]

**ಬಾಗಲಕೋಟೆ:** ಎಫ್‌ಡಿಎ ಅಭ್ಯರ್ಥಿಯೇ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದಾನೆ. ಜತೆಗೆ ಹಣದಾಸೆಗೆ ಬಿದ್ದು ಬಂಧಿತನಾಗಿದ್ದಾನೆ. ಇದು ಕೆಪಿಎಸ್ಸಿ ಎಫ್‌ಡಿಎ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಲ್ಲಿ ಬಂಧಿತನಾಗಿರುವ ಜಿಲ್ಲೆಯ ಬೀಳಗಿ ತಾಲೂಕಿನ ಬೂದಿಹಾಳ ಎಸ್.ಜಿ. ಗ್ರಾಮದ ರಮೇಶ ಹೆರಕಲ್‌ನ ಹಿನ್ನೆಲೆ. ಕೆಪಿಎಸ್ಸಿಯಲ್ಲಿ ಎಸ್‌ಡಿಎ ಆಗಿದ್ದ ರಮೇಶ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ ಹಣ ಗಳಿಸುವುದಲ್ಲದೇ ಬಡ್ತಿಯನ್ನೂ ಪಡೆಯಬೇಕು ಎಂದು ಎಫ್‌ಡಿಎ ಪರೀಕ್ಷೆ ಕಟ್ಟಿದ್ದ. ಅಷ್ಟರಲ್ಲೇ ಸಿಸಿಬಿ ಬಲೆಗೆ ಬಿದ್ದು ವಿಚಾರಣೆ ಎದುರಿಸುತ್ತಿದ್ದಾನೆ.


ರಮೇಶ ಹೆರಕಲ್



ಚಿಕ್ಕಪಡಸಲಗಿಯಲ್ಲಿ ಪ್ರಾಥಮಿಕ ಶಿಕ್ಷಣ, ಜಮಖಂಡಿಯಲ್ಲಿ ಪಿಯುಸಿ, ಬೆಳಗಾವಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಮುಗಿಸಿ ಎಸ್‌ಡಿಎ ಪರೀಕ್ಷೆ ಬರೆದು 2017ರಲ್ಲಿ ಕೆಪಿಎಸ್ಸಿಗೆ ನೇಮಕಗೊಂಡಿದ್ದ. ರಹಸ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಮೇಶ ಸ್ಟೆನೋಗ್ರಾಫರ್ ಸನಾ ಬೇಡಿಯೊಂದಿಗೆ ಸೇರಿಕೊಂಡು ಪ್ರಶ್ನೆ ಪತ್ರಿಕೆ ಲೀಕ್ ಮಾಡುವ ಪ್ಲಾನ್ ರೂಪಿಸಿ ಅದರಂತೆ ಪ್ರಶ್ನೆ ಪತ್ರಿಕೆಯನ್ನು ವಿಜಿಲೆನ್ಸ್ ಅಧಿಕಾರಿ ಚಂದ್ರುಗೆ ನೀಡಿದ್ದ. ನಂತರ ಜ.23ರಂದು ಬೂದಿಹಾಳಕ್ಕೆ ಬಂದು ಜಿಲ್ಲೆಯ ಇಬ್ಬರು ಅಭ್ಯರ್ಥಿಗಳಿಗೆ ತಲಾ 12 ಲಕ್ಷ ರೂ. ನಂತೆ ಪ್ರಶ್ನೆ ಪತ್ರಿಕೆ ಮಾರಿದ್ದಾನೆ ಎನ್ನಲಾಗುತ್ತಿದೆ. ತಾಯಿಯ ತವರು ಮನೆ ಚಿಕ್ಕಪಡಸಲಗಿಗೆ ಹೋಗಿದ್ದ ರಮೇಶ ಹಗರಣ ಹೊರಬೀಳುತ್ತಿದ್ದಂತೆ ಆತಂಕ ಶುರುವಾಗಿ ಮೊಬೈಲ್ ಸ್ವಿಚ್ ಆಫ್ ಮಾಡಿದ್ದ. ಚಂದ್ರು ನೀಡಿದ್ದ ಮಾಹಿತಿ ಆಧರಿಸಿ ಪೊಲೀಸರು ರಮೇಶನನ್ನು ಚಿಕ್ಕಪಡಸಲಗಿಯಲ್ಲಿ ವಶಕ್ಕೆ ಪಡೆದಿದ್ದಾರೆ.

### ಮತ್ತೆ 46 ಲಕ್ಷ ರೂ. ಜಪ್ತಿ

ಪ್ರಕರಣದಲ್ಲಿ ಆರೋಪಿಗಳಿಂದ ಮತ್ತೆ 46 ಲಕ್ಷ ರೂ. ಜಪ್ತಿ ಮಾಡಲಾಗಿದೆ. ಆರೋಪಿ ರಮೇಶ್‌ನ ಕಾರಿನಲ್ಲಿ 46 ಲಕ್ಷ ರೂ. ಪತ್ತೆಯಾಗಿದೆ. ಪ್ರಕರಣದಲ್ಲಿ ಈವರೆಗೆ 82 ಲಕ್ಷ ರೂ. ಜಪ್ತಿ ಮಾಡಿದಂತಾಗಿದೆ.

ಚಂದ್ರು ಬಂಧನವಾಗುತ್ತಿದ್ದಂತೆ ಬಾಗಲಕೋಟೆಕ್ಕೆ ಪರಾರಿಯಾಗಿದ್ದ ಎಸ್‌ಡಿಸಿ ರಮೇಶ್ ನೀಡಿದ ಮಾಹಿತಿ ಆಧರಿಸಿ ಸ್ಟೆನೋಗ್ರಾಫರ್ ಸನಾಳನ್ನು ಬಂಧಿಸಲಾಗಿದೆ. ಈ ಮೂಲಕ ಪ್ರಶ್ನೆಪತ್ರಿಕೆ ಸೋರಿಕೆ ಮೂಲ ಪತ್ತೆಯಾಗಿದ್ದು, ಪ್ರಕರಣದಲ್ಲಿ ಬೇರೆ ಆರೋಪಿಗಳು ಭಾಗಿಯಾಗಿರುವ ಕುರಿತು ತನಿಖೆ ಮುಂದುವರಿದಿದೆ.

-ಸಂದೀಪ್ ಪಾಟೀಲ್ ಜಂಟಿ ಪೊಲೀಸ್ ಆಯುಕ್ತ ಸಿಸಿಬಿ

### ಬೇರೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಹಿತಿ ಇಲ್ಲ

ಸನಾ ಇದೊಂದೇ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದಾಗಿ ಹೇಳಿದ್ದಾಳೆ. ಈ ಹಿಂದೆ ಏನಾದರೂ ಸೋರಿಕೆ ಮಾಡಲಾಗಿತ್ತೇ ಎನ್ನುವ ಕುರಿತು ವಿಚಾರಣೆ ನಡೆಸಬೇಕಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

### [illegible]

ಸದ್ಯಕ್ಕೆ ಸೋರಿಕೆ ಮಾಡಿದ ಪ್ರಶ್ನೆಗಳು ಮತ್ತು ಉತ್ತರ ತಿಳಿದುಕೊಂಡಿದ್ದ 13 ಅಭ್ಯರ್ಥಿಗಳಿದ್ದಾರೆ. ಅವರಿಂದ ಮತ್ತೆ ಬೇರೆ ಯಾರಾದರೂ ಪ್ರಶ್ನೆಗಳನ್ನು ಪಡೆದುಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ಅದೇ ರೀತಿ ಸನಾ, ರಮೇಶ್, ಚಂದ್ರು ಮತ್ತು ರಾಚಪ್ಪನ ಕಡೆಯಿಂದಲೂ ಯಾರಾದರೂ ಆನ್‌ಲೈನ್ ಮೂಲಕ ಪ್ರಶ್ನೆಗಳನ್ನು ಪಡೆದುಕೊಂಡಿದ್ದಾರೆಯೇ ಎಂಬುದು ತನಿಖೆ ನಂತರವೇ ಗೊತ್ತಾಗಲಿದೆ. ಏಕೆಂದರೆ, 10 ಲಕ್ಷ ರೂ.ಗೆ ಪ್ರಶ್ನೆ ಪತ್ರಿಕೆ ಪಡೆದವರು, ಅದನ್ನು ಬೇರೆಯವರಿಗೆ ಮಾರಾಟ ಮಾಡಿ ತಾವು ಖರ್ಚು ಮಾಡಿದ ಹಣವನ್ನು ರಿಕವರಿ ಮಾಡುವ ಜತೆಗೆ ಲಾಭ ಮಾಡಿಕೊಳ್ಳಲು ಸ್ಕೆಚ್ ಹಾಕಿರುವ ಸಾಧ್ಯತೆ ಇದೆ.